# IN THE COURT OF THE PRL. DISTRICT AND SESSIONS JUDGE, BAGALKOTE.

SC. No. 10/2023

| | | | |
|---|---|---|---|
| Name | : | Dr. Ramesh Akkimaradi | P.W.-14 |
| Father's name | : | Gurupadappa | CW-25 |
| Age | : | 47 years | |
| Occupation | : | Medical Officer, Akkimaradi Hospital, Anagawadi | |
| Resident of | : | Anagawadi | |

Witness duly sworn on 11.12.2025

**Examination-in-Chief by learned Public Prosecutor**

I am running private hospital by name Akkimaradi hospital at Anagawadi, Tq. Bilagi since 20 years.

On 30.11.2022 at about 10-00 p.m an injured by name Rangavva was brought to our hospital by her husband by name Maliyappa and her mother-in-law/Bhimavva. The injured has sustained a grevious injury on her head and face and she was unconscious. Since our hospital do not have the facility of MRI and x-ray, I had instructed the attenders to shift the injured immediately to Government Hospital for treatment. I have not treated the patient in our hospital as the condition of injured was critical and required treatment in higher hospital. I am now seeing the mother-in-law/Bhimavva of injured before the court. I can identify accused by name Maliyappa. In this regard police official have recorded my statement.

**Cross-examination by counsel for accused**

It is true that if a person falls on hard surface the said person likely to sustain an injury to his head.

Re-examination: Nil.

(Typed to my dictation in open court on computer)

R O & A C

Prl. Dist. & Sessions Judge, Bagalkot.

# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಬಾಗಲಕೋಟೆ

**ಸತ್ರ ಮೊಕದ್ದಮೆ ಸಂ. 10/2023**

| | | | |
|---|---|---|---|
| ಹೆಸರು | : ಪರಸಪ್ಪ ದೊಡ್ಡಗೌಡರ | | ಪ್ರಾಸಾ-16 |
| ತಂದೆಯ ಹೆಸರು | : ಮಲ್ಲಪ್ಪ | | ಚಾಸಾ-19 |
| ವರ್ಷ | : 42 ವರ್ಷ | | |
| ಉದ್ಯೋಗ | : ಒಕ್ಕಲುತನ | | |
| ವಿಳಾಸ | : ನಕ್ಕರಗುಂದಿ | | |

ದಿಃ 11.12.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

## ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದ

ನನಗೆ ಚಾಸಾ-1/ತಾಯವ್ವ ಗೊತ್ತು. ನ್ಯಾಯಾಲಯದ ಮುಂದಿರುವ 2 ನೇ ಆರೋಪಿ/ಭೀಮವ್ವ ಹಾಗೂ 1 ನೇ ಆರೋಪಿ/ಮಳಿಯಪ್ಪ ಗೊತ್ತು. ಚಾಸಾ-16/ಜ್ಯೋತಿ ಮತ್ತು ಚಾಸಾ-17/ರಂಗಪ್ಪ 1 ನೇ ಆರೋಪಿತನ ಮಕ್ಕಳು. ಮೃತ ರಂಗವ್ವ ಹೇಗೆ ಮೃತಪಟ್ಟಿರುತ್ತಾಳೆ ಎಂದು ನನಗೆ ಗೊತ್ತಿಲ್ಲ. ಮೃತ ರಂಗವ್ವ ಮತ್ತು ಆರೋಪಿತರ ನಡುವೆ ಆದ ತಂಟೆ ತಕರಾರು ನನಗೆ ಗೊತ್ತಿಲ್ಲ ಮತ್ತು ನಾನು ಅವರಿಗೆ ಯಾವುದೇ ಬುದ್ಧಿವಾದ ಹೇಳಿರುವುದಿಲ್ಲ.

2. ರಂಗವ್ವ ಮೃತಪಟ್ಟ ವಿಚಾರ ತಿಳಿದು ಆಕೆ ಶವವನ್ನು ನೋಡಲು ಬೀಳಗಿ ಸರ್ಕಾರಿ ಆಸ್ಪತ್ರೆಗೆ ಹೋಗಿದ್ದೆ, ಆದರೆ ಆಕೆ ಹೇಗೆ ಮೃತಪಟ್ಟಿರುತ್ತಾಳೆ ಮತ್ತು ಆಕೆ ಸಾವಿಗೆ ಯಾರು ಕಾರಣ ಎಂದು ನನಗೆ ಗೊತ್ತಿಲ್ಲ. ಈ ಪ್ರಕರಣದ ವಿಚಾರವಾಗಿ ಪೊಲೀಸರು ನನ್ನನ್ನು ವಿಚಾರಣೆ ಮಾಡಿ ನನ್ನ ಹೇಳಿಕೆ ಪಡೆದುಕೊಂಡಿರುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಅನುಮತಿಯನ್ನು ನೀಡಲಾಯಿತು).

## ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದ

1 ನೇ ಆರೋಪಿ ಪ್ರತಿದಿನ ಸರಾಯಿ ಕುಡಿದು ಬಂದು ಆತನ ಹೆಂಡತಿ ಮೃತ ರಂಗವ್ವಳಿಗೆ ಹೊಡಿಬಡಿ ಮಾಡುತ್ತಿದ್ದನು, ಈ ವಿಷಯ ಕುರಿತು ನಾನು ಮತ್ತು ಊರಿನ ಹಿರಿಯರು ಸೇರಿ ಆರೋಪಿತರಿಗೆ ಬುದ್ದಿವಾದ ಹೇಳಿದ್ದರೂ ಸಹ ಸುಧಾರಿಸಿರಲಿಲ್ಲ ಎಂದರೆ ಸರಿಯಲ್ಲ. ನಂತರ ಚಾಸಾ-1 ರವರು ಆರೋಪಿತರಿಗೆ 20 ಗುಂಟೆ ಜಮೀನನ್ನು ಸಾಗುವಳಿ ಮಾಡಲು ಕೊಟ್ಟಿದ್ದರು ಎಂದರೆ ನನಗೆ ಗೊತ್ತಿಲ್ಲ.

2. ದಿಃ 30.11.2022 ರಂದು ರಾತ್ರಿ 11 ಗಂಟೆಗೆ ನಾನು ನಮ್ಮ ಮನೆಯಲ್ಲಿದ್ದಾಗ 1 ನೆ ಆರೋಪಿ/ ಮಳಿಯಪ್ಪ ರಂಗವ್ವಳಿಗೆ ಹೊಡೆದಿದ್ದರಿಂದ ಆಕೆ ಪ್ರಜ್ಞೆ ತಪ್ಪಿ ಬಿದ್ದಿದ್ದು, ಆಕೆಯನ್ನು ಇಬ್ಬರೂ ಆರೋಪಿತರು ಸೇರಿ ದ್ವಿಚಕ್ರ ವಾಹನದಲ್ಲಿ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗುವಾಗ ರಸ್ತೆ ಮಧ್ಯ ತೀರಿಕೊಂಡಿರುತ್ತಾಳೆ ಎಂದು ಸುದ್ದಿ ಕೇಳಿ, ನಾನು, ಚಾಸಾ-18, 20, 21 ಹಾಗೂ 23, 24 ರವರು ಸೇರಿ ಬೀಳಗಿ ಸರ್ಕಾರಿ ಆಸ್ಪತ್ರೆಗೆ ಹೋಗಿ ರಂಗವ್ವಳ ಶವ ನೋಡಲಾಗಿ ಆಕೆಯ ಮೂಗಿನ ಮೇಲೆ, ಹಣೆಯ ಎಡಭಾಗ ಮತ್ತು ಎಡಗಣ್ಣಿನ ಹತ್ತಿರ ಗಾಯಗಳಾಗಿದ್ದವು ಎಂದರೆ ಸರಿಯಲ್ಲ. ನಂತರ ಸದರಿ ವಿಷಯವನ್ನು ಚಾಸಾ-1 ರವರಿಗೆ ಪೋನ ಮಾಡಿ ತಿಳಿಸಿದೆವು ಎಂದರೆ ಸರಿಯಲ್ಲ. ನಂತರ ಚಾಸಾ-12 ಮತ್ತು 13 ರವರಿಗೆ ಘಟನೆ ಬಗ್ಗೆ ವಿಚಾರಿಸಲಾಗಿ ಸದರಿ ದಿನದಂದು 2 ನೇ ಆರೋಪಿಯು ಮೃತ ರಂಗವ್ವಳು ಆಕೆಯ 40 ರೂ ಕದ್ದಿರುವಾಗಿ 1 ನೇ ಆರೋಪಿಗೆ ರಾತ್ರಿ ಹೇಳಿದ್ದರಿಂದ ಆಗ 1 ನೇ ಆರೋಪಿ ರಂಗವ್ವಳಿಗೆ ವಿಚಾರಿಸಿದಾಗ ರಂಗವ್ವ ಆಕೆ ಹಣ ತೆಗೆದುಕೊಂಡಿರುವುದಿಲ್ಲ ಎಂದು ಬಾಯಿ ಮಾಡುತ್ತಿರುವಾಗ 1 ನೇ ಆರೋಪಿ ಆಕೆಗೆ ಕೈಯಿಂದ ಜೊರಾಗಿ ಆಕೆಯ ಬೆನ್ನಿಗೆ, ತಲೆ ಎಡಭಾಗಕ್ಕೆ ಹೊಡೆದನು, ಆಗ ರಂಗವ್ವ ಪ್ರಜ್ಞೆ ತಪ್ಪಿ ಬಿದ್ದಿರುತ್ತಾಳೆ, ಬಾಜು ಮನೆಯವರು ಬಂದು ನೀರು ಕುಡಿಸಿದರೂ ಸಹ ಆಕೆಗೆ ಪ್ರಜ್ಞೆ ಬರಲಿಲ್ಲ ಎಂದು ತಿಳಿಸಿದರು ಎಂದರೆ ಸರಿಯಲ್ಲ. ಸದರಿ ರಂಗವ್ವಳಿಗೆ ಆರೋಪಿತರು ಮಾನಸಿಕ ಕಿರುಕುಳ ನೀಡಿ ಹೊಡಿಬಡಿ ಮಾಡಿದ್ದರಿಂದ ಆಕೆ ಮೃತಪಟ್ಟಿರುತ್ತಾಳೆ ಎಂದು ತಿಳಿದುಬಂದಿರುತ್ತದೆ ಎಂದರೆ ಸರಿಯಲ್ಲ.

2. ಈ ವಿಚಾರವಾಗಿ ಈಗ ಓದಿ ಹೇಳಿದಂತೆ ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಹೇಳಿಕೆಯಲ್ಲಿ ''ನನ್ನ ಊರು ನಕ್ಕರಗುಂದಿ ಗ್ರಾಮ........ ಕೊಲೆ ಮಾಡಿರುತ್ತಾನೆ '' ಎಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಶಾನೆ ಪಿ-17 ಎಂದು ಗುರುತಿಸಲಾಯಿತು. ನನಗೆ ಎಲ್ಲಾ ವಿಷಯ ಗೊತ್ತಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ**

ಆರೋಪಿತರ ಪರ ವಕೀಲರು ಪಾಟೀ ಸವಾಲು ಇರುವುದಿಲ್ಲ ಎಂದು ತಿಳಿಸಿರುತ್ತಾರೆ.

ಮರು ವಿಚಾರಣೆ ಇಲ್ಲ.
(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿ ಇದೆ ಎಂದು ಒಪ್ಪಿದರು

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಾಗಲಕೋಟೆ .

# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಬಾಗಲಕೋಟೆ

**ಸತ್ರ ಮೊಕದ್ದಮೆ ಸಂ. 10/2023**

| | | |
|---|---|---|
| ಹೆಸರು | : ಫಕೀರಪ್ಪ ಗೌಡರ | ಫ್ರಾಸಾ-15 |
| ತಂದೆಯ ಹೆಸರು | : ಸೋಮಪ್ಪ | ಚಾಸಾ-18 |
| ವರ್ಷ | : 50 ವರ್ಷ | |
| ಉದ್ಯೋಗ | : ಒಕ್ಕಲುತನ | |
| ವಿಳಾಸ | : ನಕ್ಕರಗುಂದಿ | |

ದಿಃ 11.12.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

## ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದ

ನನಗೆ ಚಾಸಾ-1/ತಾಯವ್ವ ಗೊತ್ತು. ನ್ಯಾಯಾಲಯದ ಮುಂದಿರುವ 2 ನೇ ಆರೋಪಿ/ಭೀಮವ್ವ ಹಾಗೂ 1 ನೇ ಆರೋಪಿ/ಮಳಿಯಪ್ಪ ಗೊತ್ತು. ಚಾಸಾ-16/ಜ್ಯೋತಿ ಮತ್ತು ಚಾಸಾ-17/ರಂಗಪ್ಪ 1 ನೇ ಆರೋಪಿತನ ಮಕ್ಕಳು. ಮೃತ ರಂಗವ್ವ ಹೇಗೆ ಮೃತಪಟ್ಟಿರುತ್ತಾಳೆ ಎಂದು ನನಗೆ ಗೊತ್ತಿಲ್ಲ. ಮೃತ ರಂಗವ್ವ ಮತ್ತು ಆರೋಪಿತರ ನಡುವೆ ಆದ ತಂಟೆ ತಕರಾರು ನನಗೆ ಗೊತ್ತಿಲ್ಲ ಮತ್ತು ನಾನು ಅವರಿಗೆ ಯಾವುದೇ ಬುದ್ಧಿವಾದ ಹೇಳಿರುವುದಿಲ್ಲ.

2. ರಂಗವ್ವ ಮೃತಪಟ್ಟ ವಿಚಾರ ತಿಳಿದು ಆಕೆ ಶವವನ್ನು ನೋಡಲು ಬೀಳಗಿ ಸರ್ಕಾರಿ ಆಸ್ಪತ್ರೆಗೆ ಹೋಗಿದ್ದೆ, ಆದರೆ ಆಕೆ ಹೇಗೆ ಮೃತಪಟ್ಟಿರುತ್ತಾಳೆ ಮತ್ತು ಆಕೆ ಸಾವಿಗೆ ಯಾರು ಕಾರಣ ಎಂದು ನನಗೆ ಗೊತ್ತಿಲ್ಲ. ಈ ಪ್ರಕರಣದ ವಿಚಾರವಾಗಿ ಪೊಲೀಸರು ನನ್ನನ್ನು ವಿಚಾರಣೆ ಮಾಡಿ ನನ್ನ ಹೇಳಿಕೆ ಪಡೆದುಕೊಂಡಿರುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಅನುಮತಿಯನ್ನು ನೀಡಲಾಯಿತು).

## ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದ

1 ನೇ ಆರೋಪಿ ಪ್ರತಿದಿನ ಸರಾಯಿ ಕುಡಿದು ಬಂದು ಆತನ ಹೆಂಡತಿ ಮೃತ ರಂಗವ್ವಳಿಗೆ ಹೊಡಿಬಡಿ ಮಾಡುತ್ತಿದ್ದನು, ಈ ವಿಷಯ ಕುರಿತು ನಾನು ಮತ್ತು ಊರಿನ ಹಿರಿಯರು ಸೇರಿ ಆರೋಪಿತರಿಗೆ ಬುದ್ದಿವಾದ ಹೇಳಿದ್ದರೂ ಸಹ ಸುಧಾರಿಸಿರಲಿಲ್ಲ ಎಂದರೆ ಸರಿಯಲ್ಲ. ನಂತರ ಚಾಸಾ-1 ರವರು ಆರೋಪಿತರಿಗೆ 20 ಗುಂಟೆ ಜಮೀನನ್ನು ಸಾಗುವಳಿ ಮಾಡಲು ಕೊಟ್ಟಿದ್ದರು ಎಂದರೆ ನನಗೆ ಗೊತ್ತಿಲ್ಲ.

2. ದಿಃ 30.11.2022 ರಂದು ರಾತ್ರಿ 11 ಗಂಟೆಗೆ ನಾನು ನಮ್ಮ ಮನೆಯಲ್ಲಿದ್ದಾಗ 1 ನೆ ಆರೋಪಿ/ ಮಳಿಯಪ್ಪ ರಂಗವ್ವಳಿಗೆ ಹೊಡೆದಿದ್ದರಿಂದ ಆಕೆ ಪ್ರಜ್ಞೆ ತಪ್ಪಿ ಬಿದ್ದಿದ್ದು, ಆಕೆಯನ್ನು ಇಬ್ಬರೂ ಆರೋಪಿತರು ಸೇರಿ ದ್ವಿಚಕ್ರ ವಾಹನದಲ್ಲಿ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗುವಾಗ ರಸ್ತೆ ಮಧ್ಯ ತೀರಿಕೊಂಡಿರುತ್ತಾಳೆ ಎಂದು ಸುದ್ದಿ ಕೇಳಿ, ನಾನು, ಚಾಸಾ-19 ರಿಂದ 21 ಹಾಗೂ 23, 24 ರವರು ಸೇರಿ ಬೀಳಗಿ ಸರ್ಕಾರಿ ಆಸ್ಪತ್ರೆಗೆ ಹೋಗಿ ರಂಗವ್ವಳ ಶವ ನೋಡಲಾಗಿ ಆಕೆಯ ಮೂಗಿನ ಮೇಲೆ, ಹಣೆಯ ಎಡಭಾಗ ಮತ್ತು ಎಡಗಣ್ಣಿನ ಹತ್ತಿರ ಗಾಯಗಳಾಗಿದ್ದವು ಎಂದರೆ ಸರಿಯಲ್ಲ. ನಂತರ ಸದರಿ ವಿಷಯವನ್ನು ಚಾಸಾ-1 ರವರಿಗೆ ಫೋನ ಮಾಡಿ ತಿಳಿಸಿದೆವು ಎಂದರೆ ಸರಿಯಲ್ಲ. ನಂತರ ಚಾಸಾ-12 ಮತ್ತು 13 ರವರಿಗೆ ಘಟನೆ ಬಗ್ಗೆ ವಿಚಾರಿಸಲಾಗಿ ಸದರಿ ದಿನದಂದು 2 ನೇ ಆರೋಪಿಯು ಮೃತ ರಂಗವ್ವಳು ಆಕೆಯ 40 ರೂ ಕದ್ದಿರುವಾಗಿ 1 ನೇ ಆರೋಪಿಗೆ ರಾತ್ರಿ ಹೇಳಿದ್ದರಿಂದ ಆಗ 1 ನೇ ಆರೋಪಿ ರಂಗವ್ವಳಿಗೆ ವಿಚಾರಿಸಿದಾಗ ರಂಗವ್ವ ಆಕೆ ಹಣ ತೆಗೆದುಕೊಂಡಿರುವುದಿಲ್ಲ ಎಂದು ಬಾಯಿ ಮಾಡುತ್ತಿರುವಾಗ 1 ನೇ ಆರೋಪಿ ಆಕೆಗೆ ಕೈಯಿಂದ ಜೊರಾಗಿ ಆಕೆಯ ಬೆನ್ನಿಗೆ, ತಲೆ ಎಡಭಾಗಕ್ಕೆ ಹೊಡೆದನು, ಆಗ ರಂಗವ್ವ ಪ್ರಜ್ಞೆ ತಪ್ಪಿ ಬಿದ್ದಿರುತ್ತಾಳೆ, ಬಾಜು ಮನೆಯವರು ಬಂದು ನೀರು ಕುಡಿಸಿದರೂ ಸಹ ಆಕೆಗೆ ಪ್ರಜ್ಞೆ ಬರಲಿಲ್ಲ ಎಂದು ತಿಳಿಸಿದರು ಎಂದರೆ ಸರಿಯಲ್ಲ. ಸದರಿ ರಂಗವ್ವಳಿಗೆ ಆರೋಪಿತರು ಮಾನಸಿಕ ಕಿರುಕುಳ ನೀಡಿ ಹೊಡಿಬಡಿ ಮಾಡಿದ್ದರಿಂದ ಆಕೆ ಮೃತಪಟ್ಟಿರುತ್ತಾಳೆ ಎಂದು ತಿಳಿದುಬಂದಿರುತ್ತದೆ ಎಂದರೆ ಸರಿಯಲ್ಲ.

2. ಈ ವಿಚಾರವಾಗಿ ಈಗ ಓದಿ ಹೇಳಿದಂತೆ ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಹೇಳಿಕೆಯಲ್ಲಿ ''ನನ್ನ ಊರು ನಕ್ಕರಗುಂದಿ ಗ್ರಾಮ........ ಕೊಲೆ ಮಾಡಿರುತ್ತಾನೆ '' ಎಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಶಾನೆ ಪಿ-16 ಎಂದು ಗುರುತಿಸಲಾಯಿತು. ನನಗೆ ಎಲ್ಲಾ ವಿಷಯ ಗೊತ್ತಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ**

ಆರೋಪಿತರ ಪರ ವಕೀಲರು ಪಾಟೀ ಸವಾಲು ಇರುವುದಿಲ್ಲ ಎಂದು ತಿಳಿಸಿರುತ್ತಾರೆ.

ಮರು ವಿಚಾರಣೆ ಇಲ್ಲ.
(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿ ಇದೆ ಎಂದು ಒಪ್ಪಿದರು

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಾಗಲಕೋಟೆ .